## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:- ಹೈದ್ರಾಬಾದ್-ಕರ್ನಾಟಕ ವಿಶೇಷ ಕೋಶಕ್ಕೆ ಹೆಚ್ಚುವರಿ ಹುದ್ದೆಗಳನ್ನು ಸೃಜಿಸುವ ಬಗ್ಗೆ.**

**ಓದಲಾಗಿದೆ:-**

1) ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 527 ಸಅಸೇ 2013, ದಿನಾಂಕ:09.07.2013.

2) ಹೈದ್ರಾಬಾದ್ ಕರ್ನಾಟಕ ವಿಶೇಷ ಕೋಶ ಕಡತ ಸಂಖ್ಯೆ:ಸಿಆಸುಇ 02 ಹೈಕಕೋ 2013 ಹಾಗೂ ಸಿಆಸುಇ 02 ಹೈಕಕೋ 2013(ಭಾ-1)

* * * * * * *

**ಪ್ರಸ್ತಾವನೆ:-**

ಮೇಲೆ ಓದಲಾದ(1)ರ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 527 ಸಅಸೇ 2013, ದಿನಾಂಕ:09.08.2013ರಲ್ಲಿ ಜಂಟಿ ಕಾರ್ಯದರ್ಶಿಗಳ ಮೇಲುಸ್ತುವಾರಿಯಲ್ಲಿ ಹೈದ್ರಾಬಾದ್-ಕರ್ನಾಟಕ ವಿಶೇಷ ಕೋಶವನ್ನು ಸೃಜಿಸಲಾಗಿರುತ್ತದೆ.

ಮೇಲೆ ಓದಲಾದ (2)ರ ಹೈದ್ರಾಬಾದ್-ಕರ್ನಾಟಕ ವಿಶೇಷ ಕೋಶದ ಕಡತದಲ್ಲಿ ಸಂವಿಧಾನದ ಕಲಂ 371ಜೆ ರನ್ವಯ ಹೈದ್ರಾಬಾದ್-ಕರ್ನಾಟಕದ ವಿಶೇಷ ಕೋಶದಲ್ಲಿ ಹೈದ್ರಾಬಾದ್-ಕರ್ನಾಟಕದ ವಿಶೇಷ ಸ್ಥಾನಮಾನ ಕಲ್ಪಿಸುವ ಸಂಬಂಧ ಶಿಕ್ಷಣ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ, ಕಾರ್ಮಿಕ ಇಲಾಖೆ, ಸಿ.ಆ.ಸು.ಇ (ಸೇವಾ ನಿಯಮಗಳು), ನಗರಾಭಿವೃದ್ಧಿ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಕಂದಾಯ ಮತ್ತಿತರ ಇಲಾಖೆಗಳ ವ್ಯಾಪ್ತಿಗೆ ಬರುವ ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ಜಾರಿಗೊಳಿಸಲು, ಪರಾಮರ್ಶಿಸಲು, ಉಸ್ತುವಾರಿ ಮೌಲ್ಯಮಾಪನ ಕಾರ್ಯ ಹಾಗೂ ಸದರಿ ಮಾಹಿತಿಗಳನ್ನು ಕ್ರೋಢೀಕರಿಸಿ ಸಚಿವ ಸಂಪುಟದ ಉಪ ಸಮಿತಿಯ ಮುಂದೆ ಸಲ್ಲಿಸುವ ಸಂಬಂಧ ದತ್ತಾಂಶಗಳನ್ನು ಕ್ರೋಢೀಕರಿಸಲು ಸಾಫ್ಟ್‌ವೇರ್ ಅಳವಡಿಸಿ ಹೈದ್ರಾಬಾದ್-ಕರ್ನಾಟಕ ವಿಶೇಷ ಕೋಶವನ್ನು ಬಲಗೊಳಿಸಬೇಕಾಗಿರುವುದರಿಂದ ಸಾಂಖ್ಯಿಕ ದತ್ತಾಂಶಗಳ ನಿರ್ವಹಣೆಗೆ ಸಾಂಖ್ಯಿಕ ಮತ್ತು ಆರ್ಥಿಕ ನಿರ್ದೇಶನಾಲಯದ ಒಬ್ಬರು ಜಂಟಿ ನಿರ್ದೇಶಕರು ಹಾಗೂ ಒಬ್ಬರು ಸಂಶೋಧನಾಧಿಕಾರಿಗಳ ಸೇವೆ ಪಡೆಯುವುದು ಅಗತ್ಯವಿರುತ್ತದೆ ಹಾಗೂ ಈ ದತ್ತಾಂಶ ನಿರ್ವಹಣೆಗೆ ಪೋರ್ಟಲ್ ವ್ಯವಸ್ಥೆ ನಿರ್ವಹಿಸಲು ಒಬ್ಬರು ICT Expert ಮತ್ತು ಇಬ್ಬರು ಡಾಟಾ ಎಂಟ್ರಿ ಆಪರೇಟರ್ಸ್‌ಗಳ ಅಗತ್ಯವಿದ್ದು ಈ ಹುದ್ದೆಗಳನ್ನು ಸೃಜಿಸುವಂತೆ ಕೋರಲಾಗಿದೆ.

ಮೇಲೆ ಓದಲಾದ (2)ರ ಹೈದ್ರಾಬಾದ್ ಕರ್ನಾಟಕ ವಿಶೇಷ ಕೋಶದ ಭಾಗ-1ರ ಕಡತದಲ್ಲಿ ಹೈದ್ರಾಬಾದ್ ಕರ್ನಾಟಕದ ವಿಶೇಷ ಕೋಶದ ಅಡಿಯಲ್ಲಿ 1. ಆಡಳಿತ ಮತ್ತು ಸಮನ್ವಯ ವಿಭಾಗ, 2.ಉಸ್ತುವಾರಿ ಮತ್ತು ಮೌಲ್ಯಮಾಪನ ವಿಭಾಗ, 3.ಐಸಿಟಿ ಮತ್ತು ಅಂತರ್‌ಜಾಲ ನಿರ್ವಹಣೆ ಎಂ.ಐ.ಎಸ್. ವಿಭಾಗ ಇವುಗಳನ್ನು ರಚಿಸಿ ಸದರಿ ವಿಭಾಗಗಳಿಗೆ ಈ ಕೆಳಕಂಡಂತೆ ಹುದ್ದೆಗಳನ್ನು ಸೃಜಿಸುವಂತೆ ಕೋರಿರುತ್ತಾರೆ.

1. **ಆಡಳಿತ ಮತ್ತು ಸಮನ್ವಯ ವಿಭಾಗ:** ಒಂದು ಅಧೀನ ಕಾರ್ಯದರ್ಶಿ, ಒಂದು ಶಾಖಾಧಿಕಾರಿ, ಒಂದು ಶೀಘ್ರಲಿಪಿಗಾರರು ಹಾಗೂ ಒಂದು ಗ್ರೂಪ್ 'ಡಿ' ಹುದ್ದೆಗಳನ್ನು ಹಾಗೂ ಗೌರವಾನ್ವಿತ ರಾಜ್ಯಪಾಲರ ಸಲಹೆಗಾರರನ್ನಾಗಿ ನಿವೃತ್ತ ಐ.ಎ.ಎಸ್ ಅಧಿಕಾರಿಯನ್ನು ನೇಮಿಸಲು ಒಂದು ವೇತನಶ್ರೇಣಿ ರಹಿತ ಗೌರವಾನ್ವಿತ ರಾಜ್ಯಪಾಲರ ಸಲಹೆಗಾರರ ಹುದ್ದೆಯನ್ನು ಸೃಜಿಸಲು,

2. **ಉಸ್ತುವಾರಿ ಮತ್ತು ಮೌಲ್ಯಮಾಪನ ವಿಭಾಗ:** ಈ ವಿಭಾಗವು ನಿರ್ದೇಶಕರು, ಕಾರ್ಯಕ್ರಮ ಉಸ್ತುವಾರಿ ಹಾಗೂ ಅನುಷ್ಠಾನ ಇವರ ನೇತೃತ್ವದಲ್ಲಿ ಕಾರ್ಯನಿರ್ವಹಿಸಬೇಕಾಗಿದ್ದು, ಈ ಸಂಬಂಧ ಸಾಂಖ್ಯಿಕ ಮತ್ತು ಆರ್ಥಿಕ ಇಲಾಖೆಯ ಅಧಿಕಾರಿಯ ಸೇವೆಯನ್ನು ಬಳಸಿಕೊಳ್ಳಬೇಕಾಗಿದ್ದು, ಈ ವಿಭಾಗಕ್ಕೆ ನಿರ್ದೇಶಕರ ಒಂದು ವೇತನ ಶ್ರೇಣಿ ರಹಿತ ಹುದ್ದೆಯನ್ನು ಇಬ್ಬರು ಸಿಬ್ಬಂದಿಯೊಂದಿಗೆ ಸೃಜಿಸಲು,
3. **ಐಸಿಟಿ ಮತ್ತು ಅಂತರ್‌ಜಾಲ ನಿರ್ವಹಣಾ ಎಂ.ಐ.ಎಸ್.ವಿಭಾಗ:** ICT Expert ಹುದ್ದೆಯನ್ನು ಹಾಗೂ ಇಬ್ಬರು ಡೇಟಾ ಎಂಟ್ರಿ ಆಪರೇಟರ್ ಹುದ್ದೆಗಳನ್ನು ಸೃಜಿಸಲು,

ಈ ಪ್ರಸ್ತಾವನೆಯ ಬಗ್ಗೆ ಆರ್ಥಿಕ ಇಲಾಖೆಯು ಪರಿಶೀಲಿಸಿ, ಒಂದು ಜಂಟಿ ನಿರ್ದೇಶಕರ ಹುದ್ದೆಯನ್ನು ಹಾಗೂ ಒಂದು ರೀಸರ್ಚ್ ಆಫೀಸರ್ ಹುದ್ದೆಯನ್ನು ಸೃಜಿಸಲು ಅನುಮತಿಸಿದೆ ಮತ್ತು ICT Expert ಹುದ್ದೆಯನ್ನು ಹಾಗೂ ಇಬ್ಬರು ಡೇಟಾ ಎಂಟ್ರಿ ಆಪರೇಟರ್‌ಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯುವಂತೆ ತಿಳಿಸಿದೆ.

ಮುಂದುವರೆದು, ಹೈದ್ರಾಬಾದ್-ಕರ್ನಾಟಕ ವಿಶೇಷ ಕೋಶದ ಆಡಳಿತ ಮತ್ತು ಸಮನ್ವಯ ವಿಭಾಗಕ್ಕೆ ಹೆಚ್ಚುವರಿಯಾಗಿ ಒಂದು ಅಧೀನ ಕಾರ್ಯದರ್ಶಿ ಹಾಗೂ ಒಂದು ಶಾಖಾಧಿಕಾರಿ ಹುದ್ದೆಯನ್ನು ಸೃಜಿಸಲು ಅನುಮತಿಸಿದೆ. ಈಗಾಗಲೇ ಒಂದು ರೀಸರ್ಚ್ ಆಫೀಸರ್ ಹುದ್ದೆಯನ್ನು ಸೃಜಿಸಲು ಅನುಮತಿಸಿರುವುದನ್ನು ಉಲ್ಲೇಖಿಸಿ ಸದರಿ ಹುದ್ದೆಯನ್ನು ನಿರ್ದೇಶಕರು, ಕಾರ್ಯಕ್ರಮ ಉಸ್ತುವಾರಿ ಹಾಗೂ ಅನುಷ್ಠಾನ ಎಂದು ಮರುಪದನಾಮೀಕರಿಸಲು ತಿಳಿಸಿದೆ. ಹಾಗೂ ICT Expert ಹುದ್ದೆಯನ್ನು ಹಾಗೂ ಇಬ್ಬರು ಡೇಟಾ ಎಂಟ್ರಿ ಆಪರೇಟರ್‌ಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯುವಂತೆ ಮತ್ತೊಮ್ಮೆ ತಿಳಿಸಿದೆ.

ಈ ಪ್ರಸ್ತಾವನೆಯ ಸಂಬಂಧ ಆರ್ಥಿಕ ಇಲಾಖೆಯು ಸಹಮತಿ ನೀಡಿರುವ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಲು ತೀರ್ಮಾನಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 166 ಸಲುಸೇ 2014**
**ಬೆಂಗಳೂರು, ದಿನಾಂಕ:13-06-2014.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹೈದ್ರಾಬಾದ್ -ಕರ್ನಾಟಕ ವಿಶೇಷ ಕೋಶದ ಉಸ್ತುವಾರಿ ಮತ್ತು ಮೌಲ್ಯಮಾಪನ ವಿಭಾಗಕ್ಕೆ ಈ ಕೆಳಕಂಡ ಹುದ್ದೆಗಳನ್ನು ಸೃಜಿಸಿ ಆದೇಶಿಸಿದೆ.

| ಕ್ರ. ಸಂ. | ಹುದ್ದೆಯ ಪದನಾಮ | ಹುದ್ದೆಗಳ ಸಂಖ್ಯೆ |
|---|---|---|
| 1 | ಜಂಟಿ ನಿರ್ದೇಶಕರು | 01 |
| 2 | ರೀಸರ್ಚ್ ಆಫೀಸರ್ | 01 |
| | ಒಟ್ಟು | 02 |

ಇದರೊಂದಿಗೆ ICT Expert ಮತ್ತು 02 ಡಾಟಾ ಎಂಟ್ರಿ ಆಪರೇಟರ್ ಹುದ್ದೆಗಳ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೂಲಕ ನೇಮಿಸಿಕೊಳ್ಳುವುದು.

ಹೈದ್ರಾಬಾದ್ -ಕರ್ನಾಟಕ ವಿಶೇಷ ಕೋಶದ ಆಡಳಿತ ಮತ್ತು ಸಮನ್ವಯ ವಿಭಾಗಕ್ಕೆ ಈ ಕೆಳಕಂಡ ಹುದ್ದೆಗಳನ್ನು ಸೃಜಿಸಿ ಆದೇಶಿಸಿದೆ.

| ಕ್ರ. ಸಂ. | ಹುದ್ದೆಯ ಪದನಾಮ | ಹುದ್ದೆಗಳ ಸಂಖ್ಯೆ |
|---|---|---|
| 1 | ಅಧೀನ ಕಾರ್ಯದರ್ಶಿ | 01 |
| 2 | ಶಾಖಾಧಿಕಾರಿ | 01 |
| | ಒಟ್ಟು | 02 |

ಇದರೊಂದಿಗೆ ಹೈದ್ರಾಬಾದ್-ಕರ್ನಾಟಕ ವಿಶೇಷ ಕೋಶದ ಉಸ್ತುವಾರಿ ಮತ್ತು ಮೌಲ್ಯಮಾಪನ ವಿಭಾಗದ ರೀಸರ್ಚ್ ಆಫೀಸರ್ ಹುದ್ದೆಯನ್ನು ನಿರ್ದೇಶಕರು, ಕಾರ್ಯಕ್ರಮ ಉಸ್ತುವಾರಿ ಹಾಗೂ ಅನುಷ್ಠಾನ ಎಂದು ಮರುಪದನಾಮೀಕರಿಸಿದೆ.

ಜಂಟಿ ನಿರ್ದೇಶಕರು ಹಾಗೂ ನಿರ್ದೇಶಕರು, ಕಾರ್ಯಕ್ರಮ ಉಸ್ತುವಾರಿ ಮತ್ತು ಅನುಷ್ಠಾನ, ಈ ಹುದ್ದೆಗಳನ್ನು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ತತ್ಸಮಾನ ವೃಂದದ ಅಧಿಕಾರಿಗಳಿಂದ ನಿಯೋಜನೆ ಮೇಲೆ ಭರ್ತಿಮಾಡುವಂತೆ ಸೂಚಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 727 ವೆಚ್ಚ-12/2013, ದಿನಾಂಕ:24.08.2013 ಹಾಗೂ ಟಿಪ್ಪಣಿ ಸಂಖ್ಯೆ:ಆಇ 265 ವೆಚ್ಚ-12/2014, ದಿನಾಂಕ:23.05.2014ರಲ್ಲಿ ನೀಡಿರುವ ಸಹಮತಿಗಳನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
Geeth 13/6/14
(ಡಾ|| ಗೀತಾ ಎಲ್.)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
(ಸೇವೆಗಳು-3)
13/6

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು-ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು.

**ಪ್ರತಿಗಳು:-**

1) ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ಸರ್ಕಾರದ ಮುಖ್ಯ ಕಾರ್ಯದರ್ಶಿ.
3) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ/ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ/ಆರ್ಥಿಕ ಇಲಾಖೆ.
4) ಸರ್ಕಾರದ ಜಂಟಿ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ/ ಆರ್ಥಿಕ ಇಲಾಖೆ.
5) ಜಂಟಿ ಕಾರ್ಯದರ್ಶಿ, ಹೈದ್ರಾಬಾದ್-ಕರ್ನಾಟಕ ವಿಶೇಷ ಕೋಶ,
6) ಸರ್ಕಾರದ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಲೆಕ್ಕಪತ್ರ-1&2)/(ಸಿಬ್ಬಂದಿ)(ಆಡಳಿತ)(ಕಾರ್ಯಕಾರಿ)/(ಸೇವಾನಿಯಮಗಳು-ಡಿ ಶಾಖೆ) (ಸೇವೆಗಳು-1,2,3,4 ಮತ್ತು 5)/ಸಿಆಸು ಇಲಾಖೆ (ಆಡಳಿತ ಸುಧಾರಣೆ).
7) ಶಾಖಾ ರಕ್ಷಾ ಕಡತ/ವೈಯಕ್ತಿಕ ಕಡತ/ಹೆಚ್ಚುವರಿ ಪ್ರತಿ.